# ಕಂಡೆ ನಾ ಉಡುಪಿಯ ಕೃಷ್ಣರಾಯನ್ನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics in the above references are same and the singer has followed these wordings.

ರಾಗ: ನೀಲಾಂಬರಿ ತಾಳ: ಅಟ

ಕಂಡೆ ನಾ ಉಡುಪಿಯ ಕೃಷ್ಣರಾಯನ್ನ, ಭೂ
ಮಂಡಲದೊಳಗೆ ಉದ್ದಂಡ ಮೋಹಿಪನ || ಪ ||

ಸಮುದ್ರವ ನಾ ಕಂಡು ಸ್ನಾನಾದಿಗಳ ಮಾಡಿ, ಚಂ-
ದ್ರಮೌಳೀಶ್ವರನ ಚರಣಕೆರಗಿ
ಆಮೇಲೆ ನಾ ಬಂದು ಅನಂತೇಶ್ವರನ್ನ ಕಂಡು, ಹ-
ನುಮಂತನ ಪಾಡಿ ಮನದಿ ನಿಲಿಸಿ || 1 ||

ಸುತ್ತು ನದಿಯ ಕಂಡೆ ಸೂರ್ಯನ ಪ್ರಭೆ ಕಂಡೆ
ಅಲ್ಲಿದ್ದ ಮಧ್ವ ಸರೋವರವ ಕಂಡೆ
ಮಧ್ವಮತದ ಅಷ್ಟ ಮುನಿಗಳ ಕಂಡೆ
ಪ್ರಸಿದ್ಧವಾಗಿರುವ ಶ್ರೀ ಉಡುಪಿಯ ಕೃಷ್ಣನ ಕಂಡೆ || 2 ||

ಉಂಗುರ ಉಡಿದಾರ ಉಡಿಘಂಟೆ ನಾ ಕಂಡೆ, ನಾನು
ರಂಗು ಮಾಣಿಕ್ಯದ ನವರತ್ನ ಮಾಲೆ ಕಂಡೆ
ಧಿಂ ಧಿಮಿ ಧಿಮಿಕೆಂದು ಕುಣಿವ ಕೃಷ್ಣನ ಕಂಡೆ
ಪುರಂದರ ವಿಠಲನ್ನ ಪಾದ ಕಮಲವ ಕಂಡೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಉದ್ದಂಡ** – ಶ್ರೇಷ್ಠವಾಗಿ.

**ಸಮುದ್ರವ** – ಉಡುಪಿಯಿಂದ ಮೂರು ಮೈಲು ದೂರವಿರುವ ಅರಬೀ ಸಮುದ್ರ.

**ಚಂದ್ರಮೌಳೀಶ್ವರನ...** – ಉಡುಪಿಯ ಮುಖ್ಯಬೀದಿಯಲ್ಲೇ ಚಂದ್ರೇಶ್ವರನ ಮತ್ತು ಅನಂತೇಶ್ವರನ ಗುಡಿಗಳಿವೆ. ಇವು ಕೃಷ್ಣನ ಗುಡಿಗಿಂತ ಪ್ರಾಚೀನವಾದುವು. ಚಂದ್ರೇಶ್ವರನಿಂದಲೇ ಊರ ಹೆಸರು ಉಡುಪು ('ಉಡು', ನಕ್ಷತ್ರಗಳ 'ಪ' ಒಡೆಯ, ಚಂದ್ರ) ಎಂದಾದುದು. ಅನಂತೇಶ್ವರನ ಗುಡಿಯಲ್ಲೇ ಮಧ್ವಾಚಾರ್ಯರು ಇರುತ್ತಿದ್ದುದು; ಅಲ್ಲೇ ಕಣ್ಮರೆಯಾದುದು. ಈಗಲೂ ಅನಂತೇಶ್ವರನ ಗುಡಿಯಲ್ಲೇ ಮಧ್ವಾಚಾರ್ಯರ ಸನ್ನಿಧಿಯಿದೆ. ಇದನ್ನು ಅನಂತಾಸನವೆಂದೂ ಕರೆಯುತ್ತಾರೆ.

**ಹನೂಮಂತನ** – ವಾದಿರಾಜರ ಪ್ರತಿಷ್ಠೆ.

**ಮಧ್ವ ಸರೋವರ** – ಕೃಷ್ಣನ ಗುಡಿಯ ನೆರೆಯಲ್ಲಿರುವ ಕೊಳ. ಮಧ್ವಾಚಾರ್ಯರು ಗೋಪೀಚಂದನದ ಗಡ್ಡೆಯಲ್ಲಿ ಅಡಗಿದ್ದ ಕೃಷ್ಣನ ಮೂರ್ತಿಯನ್ನು ಸಮುದ್ರ ತೀರದಿಂದ ಹೊತ್ತುತಂದು, ಪ್ರತಿಷ್ಠೆ ಮಾಡುವ ಮೊದಲು ಈ ಕೊಳದಲ್ಲಿ ತೊಳೆದರೆಂದು ಪ್ರತೀತಿ.

**ಅಷ್ಟ ಮುನಿಗಳ** – ಮಧ್ವಾಚಾರ್ಯರು ತಾವು ಪ್ರತಿಷ್ಠೆ ಮಾಡಿದ ಕೃಷ್ಣನ ಪೂಜೆಯನ್ನು ಸರದಿಯಂತೆ ಮಾಡಲು ಮತ್ತು ತಮ್ಮ ಸಿದ್ಧಾಂತವನ್ನು ಪ್ರಚಾರಮಾಡಲು ಎಂಟು ಮಠಗಳನ್ನು ಕೃಷ್ಣಗುಡಿಯ ನೆರೆಯಲ್ಲೆ ಏರ್ಪಡಿಸಿದರು. ಆದಮಾರು, ಕಾಣಿಯೂರು, ಕೃಷ್ಣಾಪುರ, ಪುತ್ತಿಗೆ, ಪೇಜಾವರ, ಫಲಿಮಾರು, ಶೀರೂರು, ಸೋದೆ ಇವೇ ಅಷ್ಟಮಠಗಳು, ಈ ಮಠದ ಸ್ವಾಮಿಗಳು ಎರಡು ವರ್ಷಕ್ಕೊಮ್ಮೆ ಪರ್ಯಾಯಕ್ರಮದಲ್ಲಿ ಕೃಷ್ಣನಪೂಜೆಯನ್ನು ನಿರ್ವಹಿಸುತ್ತಾರೆ. ಒಂದು ಮಠದ ಸ್ವಾಮಿಗಳು ಇನ್ನೊಂದು ಮಠದ ಸ್ವಾಮಿಗಳಿಂದ ಪೂಜೆಯ ಅಧಿಕಾರವನ್ನು ವಹಿಸಿಕೊಳ್ಳುವುದು ಪರ್ಯಾಯೋತ್ಸವವೆನಿಸಿಕೊಳ್ಳುತ್ತದೆ.

**Classification:** Keerthane
**Ankita:** purandara vittala
**Location:** Udupi, Karnataka
**Category:** Krishna Stuti,
**Sub-Category:** Krishna, Udupi, bhumi, Samudra, snana, Ananta, hanuma, mana, nadi, surya, madhva, muni, ungura, ratna, padma,

**Pravachana:** NA

**Explanation:** NA